# ತತ್ವಪದ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆ

ಗಾಯತ್ರಿ ದೇವಿ

ಉಪನ್ಯಾಸಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

DOI: https://doi.org/10.5281/zenodo.15795610

## ABSTRACT:

'ತತ್ವ' ಮತ್ತು 'ಪದ'ಗಳಿಂದ ತತ್ವಪದದ ನಿಷ್ಪತ್ತಿಯನ್ನು ನಾವು ನೋಡುವುದಾದರೆ, 'ತತ್ವ' ಎಂದರೆ 'ಯಥಾರ್ಥತೆ', ನಿಜಸ್ಥಿತಿ, ಬ್ರಹ್ಮ, ಸಾರಸ್ವರೂಪ, ಸ್ವಭಾವ, ವಸ್ತು, ಪಂಚಭೂತ, ಮೂಲ ಪದಾರ್ಥ, ಸಿದ್ಧಾಂತ, ದರ್ಶನ ಎಂಬ ಅರ್ಥಗಳನ್ನು ಒಳಗೊಂಡಿದೆ. 'ಪದ' ಎಂದರೆ 'ಹಾಡು', 'ಹದಗೊಂಡ ಶಬ್ದ' ಎಂಬ ಅರ್ಥ ನಮಗೆ ತಿಳಿಯುತ್ತದೆ. ಒಟ್ಟಾರೆಯಾಗಿ ತತ್ವಪದ ಎಂದರೆ ಪರಮಾರ್ಥಕ್ಕೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ.

ಕರ್ನಾಟಕದಾದ್ಯಂತ ದೇಸಿ ಸಾಹಿತ್ಯ ಪರಂಪರೆಯ ಸಾಲಿನಲ್ಲಿ ಈ ತತ್ವಪದವನ್ನು ಅವಲೋಕಿಸಲು ಸಾಧ್ಯ. ತತ್ವಪದಗಳ ವಿಶೇಷತೆ ಎಂದರೆ ಈ ಸಾಹಿತ್ಯ ಪರಂಪರೆ ಹುಟ್ಟುವ ಸ್ಥಳ, ಕಾಲ ಹಾಗೂ ಅಲ್ಲಿನ ಜನರ ಮನಸ್ಥಿತಿಗಳನ್ನು ಒಳಗೊಂಡಿರುತ್ತದೆ. ಇಂತಹ ಅನುಭವ ಸಾಹಿತ್ಯದಲ್ಲಿ ಆ ಕಾಲದ ವೈರುಧ್ಯಗಳು ಎದ್ದು ಕಾಣುತ್ತವೆ. ಅಂತಹ ವೈರುಧ್ಯಗಳಲ್ಲಿ ಪರಂಪರೆ ಮತ್ತು ಆಧುನಿಕತೆ ಎಂಬ ಪರಿಕಲ್ಪನೆಗಳು ಮುಖ್ಯವಾಗಿವೆ.

ಆಧುನಿಕತೆ ಎಂದರೆ ಹೊಸತು, ವರ್ತಮಾನಕ್ಕೆ ಸಂಬಂಧಿಸಿದ್ದು, ಪರಂಪರೆಗೆ ವಿರುದ್ಧವಾದದ್ದು, ಬೇರೆ ಮೂಲದಿಂದ ಬಂದದ್ದು, ಹೀಗೆ ಬೇರೆ ಬೇರೆ ಅರ್ಥಗಳಲ್ಲಿ ಅರ್ಥೈಸಿಕೊಂಡಿದ್ದೇವೆ. ಆಧುನಿಕತೆ ಎಂಬುದು ಜೀವನಶೈಲಿಗೆ ಸಂಬಂಧಿಸಿದ್ದು. ಕೆಲವೊಂದು ಸಂದರ್ಭದಲ್ಲಿ ಒಂದೇ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ನಡೆಯುವ ಬದಲಾವಣೆಗಳನ್ನು ಸೂಚಿಸಲು ಕಾಲದ ದೃಷ್ಟಿಯಿಂದ ಆಧುನಿಕತೆ ಬಳಕೆಯಾಗುತ್ತದೆ. ಆದರೆ ನಮ್ಮಲ್ಲಿ ವಸಾಹತು ಆಡಳಿತದಿಂದಾಗಿ ಆಧುನಿಕತೆಗೆ ಬೇರೆ ಅರ್ಥವಿದೆ.

ಸಾಹಿತ್ಯ ಚರ್ಚೆಯಲ್ಲಿ ಮತ್ತೆ ಮತ್ತೆ ಔಪಚಾರಿಕವಾಗಿ ಮತ್ತು ಅರೆಔಪಚಾರಿಕವಾಗಿ ಈ ಪರಂಪರೆ ಎಂಬ ಪದವನ್ನು ಬಳಸಲಾಗುತ್ತಿದೆ. ಇದರ ಔಪಚಾರಿಕ ಬಳಕೆ ಸಂಸ್ಕೃತದಲ್ಲಿ 'ಪರಂಪರಾ'ದಿಂದ ವ್ಯುತ್ಪತ್ತಿಯಾಗಿದ್ದು ಈಗ ದೇಶೀಯವಾಗಿ ಬಳಕೆಯಾಗುತ್ತಿದೆ. ಆಕ್ಸ್ ಫೋರ್ಡ್ ಡಿಕ್ಷನರಿ ಪ್ರಕಾರ ಪರಂಪರೆ ಎಂದರೆ "Handing down" ಮುಂದಿನ ಪೀಳಿಗೆಗೆ ಹಸ್ತಾಂತರಿಸು ಎಂದರ್ಥ. "ಯಾವುದಾದರೂ ಕ್ಷೇತ್ರ, ಕಲಾಶಾಲೆ ಅಥವಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪೂರ್ವಜರು ಕೊಡಮಾಡಿದ ಮತ್ತು ಸಾಮಾನ್ಯವಾಗಿ ಅನುಸರಿಸಿದ ಅನುಭವ

ಸಂಗ್ರಹ ಮತ್ತು ಬಳಕೆಯೇ ಪರಂಪರೆ." ಪರಂಪರೆ ಮತ್ತು ಆಧುನಿಕತೆ ಎಂಬ ಎರಡು ಪರಿಕಲ್ಪನೆಗಳು ತೀರಾ ಭಿನ್ನವಾದದ್ದು. ಪರಂಪರೆ ಮತ್ತು ಆಧುನಿಕತೆಯ ನಡುವೆ ಪರಸ್ಪರ ದೀರ್ಘ ಕಾಲೀನ ಸಂಘರ್ಷ ಮತ್ತು ಪರಸ್ಪರ ವಿನಿಮಯದ ಇತಿಹಾಸವಿದೆ.

ಈ ಲೇಖನದಲ್ಲಿ ಪರಂಪರೆ ಹಾಗೂ ಆಧುನಿಕತೆಯ ಅರ್ಥ ಸ್ವರೂಪ, ಅವುಗಳ ಅಸ್ತಿತ್ವ ಹಾಗೂ ತತ್ವಪದಕಾರರು ಅವುಗಳನ್ನು ಎದುರುಗೊಂಡಂತಹ ನೆಲೆಗಳನ್ನು ಚರ್ಚಿಸಲಾಗಿದೆ. ಪರಂಪರೆ ಮತ್ತು ಆಧುನಿಕತೆ ಏಕಕಾಲದಲ್ಲಿ ಸದಾ ಘರ್ಷಣೆ, ಜನಸಾಮಾನ್ಯರ ಬದುಕಿನಲ್ಲಿ ಒಳಗೊಂಡಿರುವಂತಹ ಪರಿ. ಅದನ್ನು ಎದುರಿಸಬೇಕಾದ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

**KEYWORDS:**

ತತ್ವಪದ, ಆಧುನಿಕತೆ, ಪರಂಪರೆ, ಕೈವಾರ ತಾತಯ್ಯ, ಅನುಭವ ಸಾಹಿತ್ಯ.

ಕನ್ನಡ ಸಾಹಿತ್ಯ ಚಳುವಳಿಯಲ್ಲಿ ವಚನಸಾಹಿತ್ಯ, ಕೀರ್ತನಾ ಸಾಹಿತ್ಯದಂತೆ, ತತ್ವಪದವೂ ಒಂದು ಸಾಹಿತ್ಯ ಪ್ರಕಾರವಾಗಿದೆ. ಈ ಸಾಹಿತ್ಯ ಪ್ರಕಾರದ ಬೇರು 12ನೇ ಶತಮಾನದ ಆರಂಭದಿಂದ ಕಂಡುಬಂದರೂ ನಮ್ಮ ನೆಲದಲ್ಲಿ ಗಟ್ಟಿಯಾಗಿ ಬೇರೂರಿದ್ದು ಮಾತ್ರ 17ನೇ ಶತಮಾನದ ನಂತರದಲ್ಲಿ. ತತ್ವಪದಗಳನ್ನು ಕುರಿತ ಅಧ್ಯಯನ ಬಹುಕಾಲದವರೆವಿಗೂ ವಿದ್ವಾಂಸರ, ಚರಿತ್ರಾಕಾರರ, ಸಂಶೋಧಕರ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಇಂದು ಈ ಸಾಹಿತ್ಯ ಪರಂಪರೆಯು ವಿವಿಧ ಆಯಾಮಗಳಲ್ಲಿ, ಬಹುಶಿಸ್ತೀಯ ನೆಲೆಯಲ್ಲಿ ಹಲವಾರು ಸಂಶೋಧಕರ ಗಮನವನ್ನು ತನ್ನತ್ತ ಸೆಳೆದಿದೆ. ತತ್ವಪದ ಸಾಹಿತ್ಯದ ಶೋಧ ಹಾಗೂ ಸಂಸ್ಕೃತಿ ಚಿಂತನೆಗಳು ಬಹುಮುಖ್ಯ ಎನಿಸಿದೆ.

ಶಿಷ್ಟ ಮತ್ತು ಜನಪದ ಸಂಸ್ಕೃತಿಯ ಸಂಕರ ಸಾಧಿಸುವಲ್ಲಿ, ಪುನರ್ ಮೌಲೀಕರಣದಲ್ಲಿ ಈ ತತ್ವಪದಗಳ ಪಾತ್ರ ಹಿರಿಯದು. ತತ್ವಪದಕಾರರು ತಮ್ಮ ಅನುಭವದ ಮೂಲಕ ಸಮಾಜದ ಸಮಸ್ಯೆಗಳನ್ನು ಚರ್ಚಿಸುತ್ತಾ ಸಾಹಿತ್ಯ ಚಳುವಳಿಯನ್ನು ಪ್ರಾರಂಭಿಸಿದರು. ಇವರ ಪದಗಳಲ್ಲಿ ಏಕತಾರಿಯ ನಾದದ ಜೊತೆಗೆ ಅಂತಃಕರಣದ ಪ್ರೀತಿ, ಜೀವನ ದರ್ಶನ, ತಾತ್ವಿಕತೆ ಹಾಗೂ ಮುಂದಿನ ಪೀಳಿಗೆಗೆ ಮಾರ್ಗದರ್ಶನ, ಮುಂದಿನ ದಿನಗಳಲ್ಲಿನ ಭವಿಷ್ಯವಾಣಿ ಎಲ್ಲವೂ ಹಾಸುಹೊಕ್ಕಾಗಿದೆ. ತಾವು ಸಂಚರಿಸಿದಲೆಲ್ಲಾ ಅನುಭಾವದ ಸಂಗೀತದ ಹೊಳೆಯನ್ನೇ ಹರಿಸಿದರು. ತತ್ವಪದಕಾರರು ಅಲ್ಲಲ್ಲಿ ತಮ್ಮ ಪೂರ್ವಿಕರನ್ನು ಅನುಸರಿಸಿದಂತೆ ಕಂಡರೂ ವಿನೂತನ ಹಾದಿಯನ್ನು ರೂಢಿಸಿಕೊಂಡವರು. ತಮ್ಮ ತತ್ವಪದಗಳಲ್ಲಿ ಅಡಗಿರುವಂತಹ ದ್ವೈತ ಮತ್ತು ಅದ್ವೈತ ಧಾರೆಯನ್ನು ಗುಡಿಸಲಿನಿಂದ ಗುರುಮನೆಯವರೆಗೂ ಸಾರಿದವರು.

ತತ್ವಪದ ಎಂದರೆ ಒಂದು ಅನುಭಾವಿ ಸಾಹಿತ್ಯ. ಈ ಪರಿಕಲ್ಪನೆಯ ಹುಟ್ಟನ್ನು

ಅವಲೋಕಿಸಿದರೆ ತತ್ವಪದ ಎನ್ನುವುದು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಬಳಸುವಂತಹದ್ದು. ಛಾಂದೋಗ್ಯ ಎಂಬ ಉಪನಿಷತ್ತಿನ 'ತತ್ತ್ವಮಸಿ' ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗಿದೆ. ಈ ತತ್ವಪದವನ್ನು ನಾಥಪಂಥದವರ ಸಂಧ್ಯಾಭಾಷೆಯಲ್ಲಿ ಬಾನಿ, ಮರಾಠಿ ಭಾಷೆಯಲ್ಲಿ ಅಭಂಗ್, ತೆಲುಗಿನಲ್ಲಿ ತತ್ವಮು, ಬೆಂಗಾಳಿಯಲ್ಲಿ ಬಾವುಲ್ ಗಳಾಗಿ ಕರೆದಿರುವುದುಂಟು. 'ತತ್ತ್ವಮಸಿ' (ತತ್ ತ್ವಂ ಅಸಿ) ಎಂಬ ಪದದಿಂದ ತತ್ವಪದ ಎಂಬ ಪದ ಬಳಕೆಗೆ ಬಂದಿದೆ.

'ತತ್ವ' ಮತ್ತು 'ಪದ'ಗಳಿಂದ ತತ್ವಪದದ ನಿಷ್ಪತ್ತಿಯನ್ನು ನಾವು ನೋಡುವುದಾದರೆ, 'ತತ್ವ' ಎಂದರೆ 'ಯಥಾರ್ಥತೆ', ನಿಜಸ್ಥಿತಿ, ಬ್ರಹ್ಮ, ಸಾರಸ್ವರೂಪ, ಸ್ವಭಾವ, ವಸ್ತು, ಪಂಚಭೂತ, ಮೂಲ ಪದಾರ್ಥ, ಸಿದ್ಧಾಂತ, ದರ್ಶನ ಎಂಬ ಅರ್ಥಗಳನ್ನು ಒಳಗೊಂಡಿದೆ. 'ಪದ' ಎಂದರೆ 'ಹಾಡು', 'ಹದಗೊಂಡ ಶಬ್ದ' ಎಂಬ ಅರ್ಥ ನಮಗೆ ತಿಳಿಯುತ್ತದೆ. ಒಟ್ಟಾರೆಯಾಗಿ ತತ್ವಪದ ಎಂದರೆ ಪರಮಾರ್ಥಕ್ಕೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ.

ತತ್ವಪದಗಳು ಮೊಟ್ಟಮೊದಲಿಗೆ ಅನುಭಾವ ಗೀತೆಗಳು, ಆತ್ಮ ಮತ್ತು ಪರಮಾತ್ಮನ ನಡುವಿನ ಸಂಬಂಧವನ್ನು, ಆಧ್ಯಾತ್ಮಿಕ ತತ್ವಗಳನ್ನು ಇವು ಪ್ರತಿಪಾದಿಸುತ್ತವೆ. ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಕೊಂಡ ಭಕ್ತನ ಅಂತರಾಳದಲ್ಲಿನ ತಳಮಳ, ಶ್ರದ್ಧೆ, ಭಕ್ತಿ, ಜ್ಞಾನ, ವೈರಾಗ್ಯ, ಮುಕ್ತಿಯ ಹಂಬಲ, ಅಂತರಂಗದ ಶುದ್ಧಿ, ಗುರು ಕಾರುಣ್ಯ, ಧರ್ಮ ನಿಷ್ಠೆ, ಜೀವದಯೆ, ಸಾಮಾಜಿಕ ಕಾಳಜಿ ಮುಂತಾದ ಭಾವನೆಗಳನ್ನು ಹಾಡಿನ ರೂಪದಲ್ಲಿ ವ್ಯಕ್ತಪಡಿಸುವ ಕ್ರಿಯೆಯೇ ತತ್ವಪದಗಳ ರಚನೆಗೆ ಪ್ರಮುಖ ಕಾರಣ. ಈ ತತ್ವಪದ ಸಾಹಿತ್ಯ ಕೇವಲ ಈ ಮೇಲಿನ ನೆಲಗಟ್ಟಿಗಷ್ಟೇ ಸೀಮಿತವಾಗಿರದೆ ಸಾಮಾಜಿಕ, ರಾಜಕೀಯ, ಆಚರಣಾತ್ಮಕ, ಸಾಹಿತಿಕ, ಸಾಂಸ್ಕೃತಿಕ ನೆಲೆಗಳನ್ನು ಸಹ ಪಡೆದುಕೊಂಡಿದೆ. ಶರಣರು, ದಾಸರು, ಸೂಫಿಗಳು, ಜೈನ ಧರ್ಮೀಯರು, ಆರೂಢರು, ಅವಧೂತರು, ಸಿದ್ಧರು, ನಾಥರು, ಪಾಂಚಾಲರು ಮುಂತಾದ ಅನುಭವ ಪಂಥದ ಸಾಧಕರಿಂದ ತತ್ವಪದ ಸಾಹಿತ್ಯವು ರಚನೆಯಾದ ಗೇಯಾತ್ಮಕ ಗೀತೆಗಳು ಆಗಿವೆ. ಯಾವುದೇ ಧಾರ್ಮಿಕ ಮತ್ತು ಅನುಭವಿಕ ಸಿದ್ಧಾಂತಗಳನ್ನು ಪದಗಳ ಮೂಲಕ ವ್ಯಕ್ತಪಡಿಸುವ ಒಂದು ಕ್ರಮವು ತತ್ವಪದಗಳೆನಿಸುತ್ತವೆ. ತತ್ವಪದಗಳು ಜನಸಮುದಾಯಗಳಲ್ಲಿ ಮೌಖಿಕ ಪರಂಪರೆಯ ಮೂಲಕ ನೆಲೆ ನಿಂತಿವೆ. ಇವುಗಳನ್ನು ಪ್ರಚಾರ ಮಾಡುವವರು ಏಕತಾರಿ ಮೇಳಗಳು, ಹವ್ಯಾಸಿ ಹಾಡುಗಾರರು, ತತ್ವಪದಕಾರರು, ಭಜನಾ ಮಂಡಳಿಗಳು ಮುಂತಾದವರು. ಹಬ್ಬ, ಹುಣ್ಣಿಮೆ, ಅಮಾವಾಸ್ಯೆ, ಜಾತ್ರೆ, ಉತ್ಸವ, ಉರುಸ್, ಶ್ರಾವಣ ಮಾಸ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಲ್ಲದೆ ಕಂದೀಲಿನ ಬೆಳಕಿನಲ್ಲಿ ಏಕತಾರಿಯ ನಾದದ ಮೂಲಕ

ಹಾಡುವ ಕ್ರಮದಿಂದ ವಾಗ್ರೂಪದ ಪ್ರಚಾರಕ್ಕೆ ಕಾರಣವಾಗಿವೆ. ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಜನಪ್ರಿಯತೆಯನ್ನು ಪಡೆದುಕೊಂಡಿವೆ. ತತ್ವಪದಕಾರರು ತಮ್ಮ ಬದುಕಿನಲ್ಲಿ ಅನುಭವಿಸಿದ ಸುಖ-ದುಃಖ, ಅವಮಾನಗಳನ್ನು ವಿವಿಧ ರೀತಿಯ ನೆಲೆಗಳಲ್ಲಿ ಪದಗಳ ಮೂಲಕ ಕಟ್ಟಿಕೊಡಲು ಸಿದ್ಧರಾದರು. ಸಮಾಜದಲ್ಲಿ ನಡೆಯುತ್ತಿದ್ದ ಅಸಮಾನತೆ, ಶೋಷಣೆ, ಕ್ರೌರ್ಯ, ದೌರ್ಜನ್ಯ, ಮೂಢನಂಬಿಕೆ, ಅನ್ಯಾಯ, ಜಾತಿಪದ್ಧತಿ ಮುಂತಾದ ಅಂಶಗಳನ್ನು ಇವರು ತೀವ್ರವಾಗಿ ವಿರೋಧಿಸುತ್ತಾರೆ. ನೀತಿ ಬೋಧನೆಯನ್ನು ನೀಡಿ ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸುತ್ತಾರೆ. ತತ್ವಪದಗಳು ಹಲವು ಹೆಸರುಗಳಿಂದ ಪ್ರಸ್ತುತ ಕಾಲದಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿವೆ. ತತ್ವಪದದ ಹಲವು ಹೆಸರುಗಳು: ಸ್ವರವಚನ, ಕೈವಲ್ಯ ಸಾಹಿತ್ಯ, ಭಜನಾಪದಗಳು, ಅನುಭವ ಸಾಹಿತ್ಯ, ಗುರು-ಶಿಷ್ಯರ ಪದಗಳು.

**ತತ್ವಪದ ಸಾಹಿತ್ಯದ ಸ್ವರೂಪ:**

ತತ್ವಪದ ಸಾಹಿತ್ಯ ಅನುಭಾವ ಸಾಹಿತ್ಯವಾಗಿದೆ. ಆ ಮೂಲಕವೇ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಇತ್ಯಾದಿ ನೆಲೆಗಳು ರೂಪುಗೊಳ್ಳುತ್ತವೆ. ಆತ್ಮ ಮತ್ತು ಪರಮಾತ್ಮನ ಸಂಬಂಧ, ಭಕ್ತಿ ಸಾಧನೆಯ ವಿವಿಧ ಹಂತಗಳು: ಭಕ್ತಿ, ಕರ್ಮ ಹಾಗೂ ಜ್ಞಾನಮಾರ್ಗಗಳು, ಯೋಗದ ವಿವಿಧ ಹಂತಗಳು ಪ್ರತಿಪಾದಿತವಾಗಿವೆ. ಆ ಮೂಲಕ ಸಾಧಕ ಸಾಮಾನ್ಯ ಸ್ಥಿತಿಯಿಂದ ಕೊನೆಗೂ ತಾನೇ ಮಹಾಂತನಾಗುವ, 'ಶಂಭುಲಿಂಗ' ನಾಗುವ ಅದ್ವೈತರೂಪಿ ತತ್ವಗಳನ್ನು ಕಾಣಬಹುದು.

ಇಲ್ಲಿನ ತತ್ವಪದಕಾರರು (ಮೂರನೇ ಕಾಲಘಟ್ಟ: ಕ್ರಿಸ್ತಶಕ 17-20) ಹಲವಾರು ಜಾತಿ, ವರ್ಗ, ಮತ, ಧೋರಣೆ, ಧರ್ಮ, ಸಾಮಾಜಿಕ ಸ್ಥಾನಮಾನ, ವಿಚಾರಗಳ ವೈಶಿಷ್ಟ್ಯತೆ, ಸಿದ್ಧಾಂತಗಳ ಪ್ರಭಾವ ಮುಂತಾದವುಗಳಿಂದ ಬಂದವರಾಗಿದ್ದಾರೆ. "ಹೀಗಾಗಿ ಈ ತತ್ವಪದಗಳಲ್ಲಿ ಶರಣ, ನಾಥ, ಸಿದ್ಧ, ಆರೂಢ, ಅವಧೂತ, ಶಾಕ್ತ, ಸಾಧು, ದತ್ತ ಮುಂತಾದ ಎಲ್ಲಾ ಪರಂಪರೆಗಳ ಅನುಸಂಧಾನ ಕಂಡು ಬರುತ್ತದೆ." (ಭಾಸ್ಕರ್. ಟಿ.ಎಂ.(ಸಂ). ಕಲ್ಬುರ್ಗಿ ಜಿಲ್ಲಾ ದರ್ಶನ – ಅನುಭಾವ ಸಾಹಿತ್ಯ– ಮೀನಾಕ್ಷಿ ಬಾಳಿ – ಪ್ರಸಾರಾಂಗ– ಗುಲ್ಬರ್ಗ ವಿಶ್ವವಿದ್ಯಾಲಯ–2004)

ಹೆಣ್ಣು-ಹೊನ್ನು-ಮಣ್ಣು ಇವುಗಳನ್ನು ತತ್ವಪದಕಾರರು 'ಮಾಯೆ' ಎಂದು ಕರೆದಿದ್ದಾರೆ. ಕಾರಣ, ಆಧ್ಯಾತ್ಮಿಕ ಸಾಧನೆಯನ್ನು ಮಾಡುವವನಿಗೆ ವೈರಾಗ್ಯ ಅಗತ್ಯ. ಈ ಸಂಸಾರದ ಸಾಗರದಲ್ಲಿ ಮುಳುಗಿ ಒದ್ದಾಡುವುದರ ಬದಲು ಶಾಶ್ವತವಾಗಿ ಸುಖವನ್ನು ಪಡೆದುಕೊಳ್ಳುವ ಕಡೆ ಎಲ್ಲಾ ತತ್ವಪದಕಾರರು ಗಮನವನ್ನು ಕೇಂದ್ರೀಕರಿಸಿದ್ದಾರೆ. ಸನ್ಯಾಸಿಗಳು ಸಂಸಾರವನ್ನು ತ್ಯಜಿಸಿ ಅನುಭಾವಿಗಳಾದವರಲ್ಲಿ ಈ ಭಾವ ಎದ್ದು

ಕಾಣುತ್ತದೆ. ಸಂಸಾರದಲ್ಲಿ ಇದ್ದುಕೊಂಡೇ ಅನುಭಾವಪಥದಲ್ಲಿ ಸಾಗಿದವರು ಅನೇಕರು ಕಂಡುಬರುತ್ತಾರೆ (ಇವರು ಹೊನ್ನು-ಹೆಣ್ಣು-ಮಣ್ಣನ್ನು ಮಾಯೆ ಎಂದು ಕರೆದಿರುವುದು ವಿರಳ. ಉದಾ: ಭೂತಾಳೆ ಶಿಲಪ್ಪ, ಕಲ್ಮಲಾತಾಯಣ್ಣ, ಹೊಸೂರು ತಿಪ್ಪಣ್ಣ ಮುಂತಾದವರು).

ತತ್ವಪದ ಸಾಹಿತ್ಯವು ಪ್ರಭುತ್ವದಿಂದ ಯಾವುದೇ ಉಳಿಯದೆ ಜನಸಾಮಾನ್ಯರ ನಡುವೆಯೇ ಹುಟ್ಟಿ ಬೆಳೆದ ಸಾಹಿತ್ಯವಾಗಿದೆ. ಹೀಗಾಗಿ ತತ್ವಪದಕಾರರಿಗೆ ಯಾವುದೇ ರಾಜಾಶ್ರಯದ ಹಂಗಿಲ್ಲ.

ತತ್ವಪದಕಾರರ ಆಧ್ಯಾತ್ಮಿಕ ಸಾಧನೆಯಲ್ಲಿ ಸಾಧಕನ ಭಕ್ತಿಯ ಹಂಬಲ, ಅಂತರಂಗದ ಅರಿವು, ಮುಕ್ತಿಯ ಬಯಕೆ, ನಿರಂತರ ಜಾಗೃತಿ, ನೈತಿಕ ನಿಷ್ಠೆ, ಜ್ಞಾನ, ವೈರಾಗ್ಯ, ಯೋಗದ ಪ್ರತಿಪಾದನೆ ಮುಂತಾದವುಗಳು ಪ್ರಮುಖ ಅಂಶಗಳಾಗಿವೆ.

ತತ್ವಪದದ ಸಾಹಿತ್ಯವು ಸ್ಥಾವರಕ್ಕಿಂತ ಜಂಗಮ ಸ್ಥಿತಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದೆ. ಹೀಗಾಗಿ ಇಲ್ಲಿ ಗುರುವಿಗೆ ಆಶ್ರಯ ಸ್ಥಾನವಿದೆ. ಗುರುವೇ ಅನುಭವದ ಬೆಳಕು, ಮೋಕ್ಷದ ಹಾದಿ ತೋರುವ ದಾರ್ಶನಿಕ. ಆದ್ದರಿಂದ ಇಲ್ಲಿ ಶರಣಸತಿ-ಗುರುಪತಿ ಭಾವವನ್ನು ಕಾಣಬಹುದು.

ತತ್ವಪದಕಾರರು ಎಲ್ಲಾ ಧರ್ಮ, ಜಾತಿ, ಮತ, ಪಂಥಗಳ ತತ್ವಗಳನ್ನು ಗೌರವಿಸುವವರಾಗಿದ್ದಾರೆ. ಇವರು ಧರ್ಮದ ಸ್ಥಾವರ, ಪೂಜೆ, ಆಚರಣೆಗಳಿಗೆ ಹೆಚ್ಚಿನ ಮನ್ನಣೆ ನೀಡಿಲ್ಲ. ಹಾಗೆಯೇ ದೈವವನ್ನು ಬಾಹ್ಯದಲ್ಲಿ ಹುಡುಕದೆ ಅರಿವಿನ ಮುಖಾಂತರ ತಮ್ಮ ತಮ್ಮ ಅಂತರಂಗದಲ್ಲಿ ಅರಸುವ ಪ್ರಯತ್ನ ನಡೆಸಿದ್ದಾರೆ. ಉದಾ: "ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೋ ತನ್ನಂತೆ ಸರ್ವರ ಜೀವ ಮನ್ನಿಸಿ ಮುಕ್ತಾದ ಮೇಲೆ ಇನ್ನೇನಿನ್ನೇನೋ".......॥ಪ॥ (ಲಿಂಗರಾಜು (ಸಂ)- ಕಡಕೋಳ ಮಡಿವಾಳಪ್ಪ - ಮುತ್ತಿನ ಹಾರ- ಕರ್ನಾಟಕ ಸಾಹಿತ್ಯ ಅಕಾಡೆಮಿ - ಬೆಂಗಳೂರು-1996) ಈ ರೀತಿಯಾಗಿ ತತ್ವಪದ ಸಾಹಿತ್ಯವು ಅನೇಕ ವಿಶಿಷ್ಟ ಸ್ವರೂಪಗಳನ್ನು ಹೊಂದಿವೆ. ದಾಸ ಮತ್ತು ವಚನ ಸಾಹಿತ್ಯಗಳು ಅನುಕ್ರಮವಾಗಿ ಹರ ಮತ್ತು ಹರಿಸ್ತುತಿ ಪರವಾದ ಸಾಹಿತ್ಯವಾದರೆ, ತತ್ವಪದಗಳು ಬಹುಧಾರ್ಮಿಕ, ಬಹು ಸಂಸ್ಕೃತಿಯ ತತ್ವಗಳನ್ನು ತತ್ವಪದಗಳಲ್ಲಿ ಅರಗಿಸಿಕೊಂಡಿವೆ. ತತ್ವಪದಗಳು ಸಾಂಸ್ಕೃತಿಕವಾಗಿ ಪ್ರಾಮುಖ್ಯತೆಯನ್ನು ಗಳಿಸಿವೆ. ಇವುಗಳಿಗೆ ಹೆಚ್ಚು ಪ್ರಚಾರ ಹಾಗೂ ಮಾನ್ಯತೆ ದೊರೆಯುವ ಅವಶ್ಯಕತೆಯಿದೆ.

**ಪರಂಪರೆ:**

ಸಾಹಿತ್ಯ ಚರ್ಚೆಯಲ್ಲಿ ಮತ್ತೆ ಮತ್ತೆ ಔಪಚಾರಿಕವಾಗಿ ಮತ್ತು

ಅರೆಔಪಚಾರಿಕವಾಗಿ ಈ ಪರಂಪರೆ ಎಂಬ ಪದವನ್ನು ಬಳಸಲಾಗುತ್ತಿದೆ. ಇದರ ಔಪಚಾರಿಕ ಬಳಕೆ ಸಂಸ್ಕೃತದಲ್ಲಿ 'ಪರಂಪರಾ'ದಿಂದ ವ್ಯುತ್ಪತ್ತಿಯಾಗಿದ್ದು ಈಗ ದೇಶೀಯವಾಗಿ ಬಳಕೆಯಾಗುತ್ತಿದೆ. ಆಕ್ಸ್ ಫೋರ್ಡ್ ಡಿಕ್ಷನರಿ ಪ್ರಕಾರ ಪರಂಪರೆ ಎಂದರೆ "Handing down" ಮುಂದಿನ ಪೀಳಿಗೆಗೆ ಹಸ್ತಾಂತರಿಸು ಎಂದರ್ಥ. "ಯಾವುದಾದರೂ ಕ್ಷೇತ್ರ, ಕಲಾಶಾಲೆ ಅಥವಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪೂರ್ವಜರು ಕೊಡಮಾಡಿದ ಮತ್ತು ಸಾಮಾನ್ಯವಾಗಿ ಅನುಸರಿಸಿದ ಅನುಭವ ಸಂಗ್ರಹ ಮತ್ತು ಬಳಕೆಯೇ ಪರಂಪರೆ."

ಪರಂಪರೆ ಎಂಬ ಅರಿವಿನಲ್ಲಿ ಸಂಪ್ರದಾಯವನ್ನು ಮುಂದುವರೆಸುವುದು ಹಾಗೆಂದರೆ ನಾವು ಆಚರಿಸುವಂತಹ ಆಚರಣೆಗಳಿಗೆ ದೀರ್ಘಾಯುಸ್ಸನ್ನು ಕೊಡುವುದು, ಕುಟುಂಬ ಮತ್ತು ಸಂಪ್ರದಾಯದ ಬಗೆಗಿನ ಅರಿವು.

ಭಾರತೀಯ ಸಂದರ್ಭದಲ್ಲಿ ಪರಂಪರೆ ಎಂಬ ಪದವು ಸಾಂಪ್ರದಾಯಿಕ ಅರ್ಥದಲ್ಲಿ ಎರಡು ಪ್ರಧಾನ ಅಂಶಗಳನ್ನು ಒಳಗೊಂಡಿದೆ.

1. **ಮಾರ್ಗ–ಮೆಟ್ರೋಪಾಲಿಟನ್ – ಮೂಲಧಾರೆಯ ಸಂಪ್ರದಾಯ**
2. **ದೇಶಿ– ಪ್ರಾದೇಶಿಕ, ಉಪಸಾಂಸ್ಕೃತಿಕ ಸಂಪ್ರದಾಯಗಳು**

ಈ ಮೇಲ್ಕಂಡ ನೆಲೆಗಳಲ್ಲಿ ನಾವು ಭಾರತೀಯರು ಪರಂಪರೆಯನ್ನು ಶೈಕ್ಷಣಿಕವಾಗಿ ಅರ್ಥೈಸಿಕೊಂಡಿದ್ದೇವೆ. ಆದರೆ ಪರಂಪರೆ ಎಂಬ ಪದಕ್ಕೆ ಜನಸಾಮಾನ್ಯರಲ್ಲಿ ಇರುವ ಅರ್ಥವೇ ಬೇರೆ ಸ್ವರೂಪದ್ದು.

ಸಾಮಾನ್ಯ ಅರ್ಥದಲ್ಲಿ ಪರಂಪರೆ ಎಂದರೆ ಆಧುನಿಕವಲ್ಲದ್ದು ಯಾವುದೋ ಅದೇ ಪರಂಪರೆ, ಯಾವುದು ನಮ್ಮ ಗತಕಾಲದ ಭಾಗವೋ ಅದೇ ಪರಂಪರೆ, ಯಾವುದು ಶಾಸ್ತ್ರಜ್ಞಾನದ ತಾರ್ಕಿಕ ಬೆಳವಣಿಗೆಯಾಗಿರದೆ, ನಮ್ಮ ಅನುಭವ ಜ್ಞಾನದ ಭಾಗವಾಗಿ ಮಾತ್ರ ಉಳಿದಿರುವುದೇ ಪರಂಪರೆ, ನಾವು ಹಿರಿಯರಿಂದ ಕಲಿತು ಅನುಕರಿಸುತ್ತಿರುವುದೇ ಪರಂಪರೆಯಾಗಿದೆ.

ನಿಜವಾದ ಅರ್ಥದಲ್ಲಿ ಹೇಳುವುದಾದರೆ ಒಬ್ಬ ವ್ಯಕ್ತಿ ತನ್ನ ಬೆಳವಣಿಗೆಯ ಭಾಗವಾಗಿ ಕಲಿಯುವ ಜ್ಞಾನ. ಆದರೆ ಈ ಅರ್ಥವನ್ನು ನಾವು ಪರಿಗಣಿಸುತ್ತಿಲ್ಲ. ನಾವು ಆಧುನಿಕ ಚಿಂತನೆಗಳ ನೆರಳಲ್ಲಿ ಪರಂಪರೆ ಎಂದರೆ ಮನುಷ್ಯನ ವರ್ತನೆಯ ಹಿಂದಿರುವ ಸೂತ್ರ ಎಂದಷ್ಟೇ ನೋಡುವುದು ರೂಢಿಯಾಗಿಬಿಟ್ಟಿದೆ. ಇದು ಪರಂಪರೆಯನ್ನು ಜಡವಾಗಿ ನೋಡುವ ಕ್ರಮವೂ ಹೌದು. ಈ ಪರಂಪರೆ ಮನುಷ್ಯನ ವರ್ತನೆ, ಆಚಾರ ವಿಚಾರ, ಚಿಂತನೆಗಳನ್ನು ರೂಪಿಸುವಲ್ಲಿ ಪ್ರಭಾವಿಸುತ್ತಿರುತ್ತದೆ.

**ಆಧುನಿಕತೆ:**

ಆಧುನಿಕತೆ ಎಂದರೆ ಹೊಸತು, ವರ್ತಮಾನಕ್ಕೆ ಸಂಬಂಧಿಸಿದ್ದು, ಪರಂಪರೆಗೆ ವಿರುದ್ಧವಾದದ್ದು, ಬೇರೆ ಮೂಲದಿಂದ ಬಂದದ್ದು, ಹೀಗೆ ಬೇರೆ ಬೇರೆ ಅರ್ಥಗಳಲ್ಲಿ ಅರ್ಥೈಸಿಕೊಂಡಿದ್ದೇವೆ. ಆಧುನಿಕತೆ ಎಂಬುದು ಜೀವನಶೈಲಿಗೆ ಸಂಬಂಧಿಸಿದ್ದು. ಕೆಲವೊಂದು ಸಂದರ್ಭದಲ್ಲಿ ಒಂದೇ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ನಡೆಯುವ ಬದಲಾವಣೆಗಳನ್ನು ಸೂಚಿಸಲು ಕಾಲದ ದೃಷ್ಟಿಯಿಂದ ಆಧುನಿಕತೆ ಬಳಕೆಯಾಗುತ್ತದೆ. ಆದರೆ ನಮ್ಮಲ್ಲಿ ವಸಾಹತು ಆಡಳಿತದಿಂದಾಗಿ ಆಧುನಿಕತೆಗೆ ಬೇರೆ ಅರ್ಥವಿದೆ.

ನಮ್ಮದಲ್ಲದ ಇಂಗ್ಲೀಷ್ ಶಿಕ್ಷಣ, ಚಿಂತನೆಗಳು, ಜೀವನ ಕ್ರಮ, ಉಡುಪು, ಆಚಾರ ವಿಚಾರ, ವೃತ್ತಿ ಇವೆಲ್ಲವೂ ನಾವು ಊಹಿಸಲು ಅಸಾಧ್ಯವಾಗುವಷ್ಟು ಬದಲಾವಣೆಗಳನ್ನು ತಂದವು. ಈ ಬದಲಾವಣೆ ಪ್ರಕ್ರಿಯೆಗೆ ಆಧುನಿಕತೆ ಎಂದು ಬಳಕೆಯಲ್ಲಿದೆ. ಈ ಚಿಂತನೆಯೇ ನಮ್ಮಲ್ಲಿ ಮುಂದುವರೆದು ಇಂಗ್ಲೀಷ್ ಶಿಕ್ಷಣದ ಪೂರ್ವ ಕಾಲವನ್ನು ಆಧುನಿಕ ಪೂರ್ವ ಎಂದು, ಇಂಗ್ಲೀಷ್ ಶಿಕ್ಷಣದ ಕಾಲವನ್ನು ಆಧುನಿಕ ಕಾಲವೆಂದು ಗುರುತಿಸಲಾಯಿತು. ಆಧುನಿಕತೆ ಎಂಬುದು ಒಂದಲ್ಲ ಹಲವು ಹೊಸತುಗಳ ಬಗೆ. ಇದು ನಿರಂತರ ಪ್ರಕ್ರಿಯೆ. ಆಧುನಿಕತೆಯ ಆರಂಭವನ್ನು ಗುರುತಿಸಿದಂತೆ ಅದರ ಅಂತ್ಯವನ್ನು ಗುರುತಿಸುವುದು ಅಸಾಧ್ಯ.

ಆಧುನಿಕತೆ ಎಲ್ಲರಲ್ಲೂ ಒಂದೇ ಕಾಲದಲ್ಲಿ ಮೂಡುವಂತಹ ಬದಲಾವಣೆಯಲ್ಲ. ಆಧುನಿಕತೆ ಒಬ್ಬೊಬ್ಬರ ಆಲೋಚನಾ ಕ್ರಮವನ್ನು ಒಂದೊಂದು ಸಲ ಪ್ರವೇಶಿಸುವಂತಹದ್ದು. ಇದಕ್ಕೆ ಕಲಿಕೆ ಅತೀ ಮುಖ್ಯ.

ಆಧುನಿಕತೆ ಎಂದರೇನು? ಎಂಬ ಪ್ರಶ್ನೆಗೆ ಇದಮಿತ್ಥಂ ಎಂಬ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಆಧುನಿಕತೆಯು ಒಡ್ಡುವ ಸವಾಲುಗಳಿಂದಲೇ ನಾವು ಆಧುನಿಕತೆಯ ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯ. ಇದು ಕೇವಲ ವ್ಯಾಪಾರ, ವಹಿವಾಟು, ತಂತ್ರಜ್ಞಾನ, ವಿಜ್ಞಾನ, ವೃತ್ತಿ ಇವುಗಳನ್ನು ಮಾತ್ರ ಪ್ರವೇಶಿಸಿಲ್ಲ. ಭಾರತೀಯ ಬದುಕಿನ ಬಹುಮುಖ್ಯ ಅಸ್ತಿತ್ವಗಳಾದ ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮುಂತಾದ ಜೀವಂತ ವಲಯಗಳನ್ನು ಪ್ರವೇಶಿಸಿದೆ. ಹೀಗೆ ಪ್ರವೇಶಿಸಿದ ಆಧುನಿಕತೆ ನಮ್ಮಲ್ಲಿ ಉಂಟುಮಾಡುವ ಸವಾಲುಗಳು ನಮ್ಮ ಬದುಕಿನ ಕ್ರಮವನ್ನು, ಚಿಂತನಾಕ್ರಮವನ್ನು ತಲೆಕೆಳಗು ಮಾಡುತ್ತದೆ. ಈ ಬದಲಾವಣೆಯನ್ನು ಅಥವಾ ಆಧುನಿಕತೆಯು ನಮ್ಮಲ್ಲಿ ಉಂಟುಮಾಡುವ ಪ್ರಶ್ನೆಗಳು, ಆ ಪ್ರಶ್ನೆಯಿಂದ ಉಂಟಾಗುವ ಗೊಂದಲವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ಆಧುನಿಕ ಪ್ರಶ್ನೆಗಳು ನಮ್ಮಲ್ಲಿ ಉಂಟು ಮಾಡುವ ಸಾಂಸ್ಕೃತಿಕ ಆಘಾತಗಳನ್ನು ಎದುರಿಸಲು, ಒಪ್ಪಿಕೊಳ್ಳಲು ಒಂದು ತಿಳುವಳಿಕೆ ಬೇಕಾಗಿದೆ.

### ತತ್ವಪದಕಾರರಲ್ಲಿ ಪರಂಪರೆ ಮತ್ತು ಆಧುನಿಕತೆಯ ವೈರುಧ್ಯ:

ಪರಂಪರೆ ಮತ್ತು ಆಧುನಿಕತೆ ಎಂಬ ಎರಡು ಪರಿಕಲ್ಪನೆಗಳು ತೀರಾ ಭಿನ್ನವಾದದ್ದು. ಪರಂಪರೆ ಮತ್ತು ಆಧುನಿಕತೆಯ ನಡುವೆ ಪರಸ್ಪರ ದೀರ್ಘ ಕಾಲೀನ ಸಂಘರ್ಷ ಮತ್ತು ಪರಸ್ಪರ ವಿನಿಮಯದ ಇತಿಹಾಸವಿದೆ. ಈ ತತ್ವಪದಗಳು ಶ್ರೀಮಂತಗೊಂಡದ್ದು ಆಧುನಿಕತೆಯು ತನ್ನ ಬಣ್ಣವನ್ನು ಪಸರಿಸುತ್ತಿದ್ದ ಕಾಲಘಟ್ಟದಲ್ಲಿ. ಈ ತತ್ವಪದಕಾರರು ಒಪ್ಪಿಕೊಂಡಿದ್ದ ವಿಚಾರಗಳನ್ನು, ಬದುಕನ್ನು ಒಮ್ಮೆಲೇ ಆಧುನಿಕತೆಯು ಆವರಿಸುತ್ತಿದ್ದದ್ದನ್ನು ಗಮನಿಸಿದ ತತ್ವಪದಕಾರರು ಸ್ವಲ್ಪ ಮಟ್ಟಿಗೆ ಪರಂಪರೆಯಿಂದ ವಿಚಲಿತರಾಗಿದ್ದಂತೂ ನಿಜ. ತತ್ವಪದಗಳು ಹಿಂದೆ ಹೇಳಿದಂತೆ ಅನುಭಾವಿ ಪರಂಪರೆಯಿಂದ ರೂಪುಗೊಂಡ ಮನಸ್ಸುಗಳು. ಇವರು ತಮ್ಮ ಅನುಭವದ ಸಾರವನ್ನು ತತ್ವವನ್ನಾಗಿಸಿ ಜನಮಾನಸದಲ್ಲಿ ಪ್ರಚಾರ ಮಾಡಿದವರು. ಇವರು ಜಡಪರಂಪರೆಯನ್ನು ತಿರಸ್ಕರಿಸುತ್ತಾ, ಜ್ಞಾನ ಪರಂಪರೆಯನ್ನು ಒಪ್ಪಿಕೊಂಡವರು. ಪರಂಪರೆಯಿಂದ ಬಂದಂತಹ ಜ್ಞಾನವನ್ನು ಮುಂದಿನ ಪೀಳಿಗೆಗೆ ಪ್ರಚಾರ ಮಾಡುವ ಉದ್ದೇಶ ಹೊಂದಿದ್ದರು. ಈ ಮೂಲಕ ಪರಂಪರೆಯಲ್ಲದ ಆಧುನಿಕತೆಯ ಬದಲಾವಣೆಗಳನ್ನು ಎದುರುಗೊಂಡವರು.

ತತ್ವಪದಕಾರರು ಆಧುನಿಕತೆಯು ತಂದಂತಹ ಅನಿರೀಕ್ಷಿತ ಬದಲಾವಣೆಗಳನ್ನು ಪ್ರಶ್ನೆ ಮಾಡುವುದರ ಮೂಲಕ ನೆಲಮೂಲೀಯ ಜ್ಞಾನವನ್ನು (ಪರಂಪರೆ: ಒಬ್ಬ ವ್ಯಕ್ತಿ ತನ್ನ ಬೆಳವಣಿಗೆಯ ಭಾಗವಾಗಿ ಕಲಿಯುವ ಜ್ಞಾನ) ಗಟ್ಟಿಗೊಳಿಸುವ ಪ್ರಯತ್ನ ಮಾಡಿದರು. ಜ್ಞಾನ ಪರಂಪರೆ ಮತ್ತು ಆಧುನಿಕತೆಯ ವೈರುಧ್ಯಗಳನ್ನು ತತ್ವಪದಕಾರರ ತತ್ವಗಳಲ್ಲಿ ಹಾಗೂ ಕಾಲಜ್ಞಾನದಲ್ಲಿ ಊಹಿಸಬಹುದಾಗಿದೆ. ಉದಾಹರಣೆಗೆ: ನಾಟಿ ವೈದ್ಯಪದ್ಧತಿ v/s ಆಧುನಿಕ ವೈದ್ಯ ಪದ್ಧತಿ, ಪಾರಂಪರಿಕ ನೀರಾವರಿ v/s ಆಧುನಿಕ ನೀರಾವರಿ, ಪಾರಂಪರಿಕ ಸುಂಕವ್ಯವಸ್ಥೆ v/s ಆಧುನಿಕ ಸುಂಕವ್ಯವಸ್ಥೆ, ಮಡಿಕೆಗಳು v/s ಅಲ್ಯೂಮಿನಿಯಂ ಪಾತ್ರೆಗಳು, ಆಹಾರಕ್ರಮ ಹೀಗೆ ತತ್ವಪದಗಳಲ್ಲಿ ಪರಂಪರೆ ಮತ್ತು ಆಧುನಿಕತೆಯ ನಡುವಿನ ವೈರುಧ್ಯಗಳನ್ನು ಗಮನಿಸಬಹುದಾಗಿದೆ.

### ನಾಟಿ ವೈದ್ಯ v/s ಆಧುನಿಕ ವೈದ್ಯ:

ಕೋಲಾರ ಜಿಲ್ಲೆಯ ತತ್ವಪದಕಾರರು ಗಟ್ಟಹಳ್ಳಿ ಆಂಜಿನಪ್ಪ. ಆಂಜಿನಪ್ಪನವರ "ಶ್ರೀ ಪರಮಾತ್ಮ ಕವಿ ಶತಕಂ" ಈ ಕೃತಿಯ ತತ್ವಗಳಲ್ಲಿ ಕೆಲವು ಯೋಗಕ್ಕೆ ಉಪಯೋಗವಾಗುವ ತಾಂತ್ರಿಕ ಮೂಲಿಕೆಗಳನ್ನು ತಿಳಿಸಿದ್ದಾರೆ.

**"ಪಚ್ಚ ಪಾಪಿಟಕಾಯಿ–ಪವನುನಿಪ್ಪೈ ಪೊರಕು।**
**ಉಟ್ಟಿಮೀದ ಚಕ್ಕ–ವುಡಕಬೆಟ್ಟಿ।**
**ಪಾಮುಕಾಟುಕಲನ್ನಿ–ಪರಿಹಾರ ಮೌನುರಾ।**

**ನಿಲಚಿ ಚೂಡವಯ್ಯ–ನಿರ್ಮಲಾತ್ಮ ॥25॥''**

ಕನ್ನಡ ಅನುವಾದ: ಪಚ್ಚ ಪಾಪಿಟಕಾಯಿ, ಪವನದ ಮೇಲಿನ ತೊಗಟೆ (ಇದು ಬಹುಶಃ ವನಸ್ಪತಿಯ ಹೆಸರೇ ಆಗಿರಬೇಕು)– ಈ ಎರಡನ್ನೂ ಚೆನ್ನಾಗಿ ಹಬೆಯ ಶಾಖದ ವಿಧಾನದಿಂದ ಕುದಿಸಬೇಕು. ಈ ಔಷಧದಿಂದ (ಪಾನ ಅಥವಾ ಲೇಪನ?) ಹಾವಿನ ಕಡಿತದಿಂದಾದ ವಿಷಯುಕ್ತ ಘಾಯಗಳು ಪರಿಹಾರವಾಗುತ್ತವೆ.

**''ತೇಲುಕೊಂಡಿ ಚಕ್ಕ–ತೆಲ್ಲಗಡ್ಡ ರಸಮು।**
**ಕಲ್ಲುಪಾಲು ಬೋಸಿ–ಕಲಿಪಿ ಕಾಂಚಿ।**
**ಕಾಮಕ್ರೋಧಮುಲನ್ನಿ–ಕ್ರಮಮುಗಾ ಮಾನುರಾ।**
**ನಿಲಚಿ ಚೂಡವಯ್ಯ–ನಿರ್ಮಲಾತ್ಮ ॥26॥''**

ಕನ್ನಡ ಅನುವಾದ: ಚೇಳುಕೊಂಡಿ ಚಕ್ಕೆ, ಬೆಳ್ಳುಳ್ಳಿಯ ರಸಗಳನ್ನು ಈಚಲು ಮರದ ಹಾಲಿನೊಡನೆ (ಹೆಂಡದ ಹಾಲು) ಬೆರೆಸಿ ಕಾಯಿಸಬೇಕು. ಈ ಔಷಧದಿಂದ (ಪಾನ ಅಥವಾ ಲೇಪನ?) ಕಾಮ–ಕ್ರೋಧಾದಿಗಳು ಕ್ರಮವಾಗಿ ತೊಲಗುತ್ತವೆ.

**''ನೇಲ ತಾಟಿ ಗಡ್ಡ–ನಲ್ಲುಪ್ಪಿ ಚಕ್ಕಯು।**
**ಆವು ಪಾಲು ತೇನೆ–ಅದನು ಪರಚಿ।**
**ನೆಲಕೊಕ್ಕ ದಿನಮ್ಮೆನ–ನೇರ್ಪುತೋ ಭಕ್ಷಿಂಚಿ।**
**ನಿಲಚಿ ಚೂಡವಯ್ಯ–ನಿರ್ಮಲಾತ್ಮ ॥27॥''**

**ಕನ್ನಡ ಅನುವಾದ:** ಭೂತಾಳೆಗಡ್ಡೆ ಮತ್ತು ನಲ್ಲುಪ್ಪಿಯ ಚಕ್ಕೆಗೆ ಆಕಳ ಹಾಲನ್ನು ಹಾಗೂ ಜೇನನ್ನು ಸೂಕ್ತ ಪ್ರಮಾಣದಲ್ಲಿ ಸೇರಿಸಿ ಸಿದ್ಧಪಡಿಸಿಕೊಳ್ಳಬೇಕು. ಈ ಔಷಧವನ್ನು ತಿಂಗಳಿಗೊಮ್ಮೆಯಾದರೂ ಸೇವಿಸುವುದರಿಂದ ಯೋಗಸಾಧನೆಗೆ ಪ್ರಗತಿ ಬರುತ್ತದೆ.'' (ಕೈಪು ಲಕ್ಷ್ಮೀನರಸಿಂಹ ಶಾಸ್ತ್ರೀ. ಪರಮಾತ್ಮ ಕವಿಶತಕಂ. ಶ್ರೀ ಅಂಜನಪ್ಪ ಸ್ವಾಮಿ ಟ್ರಸ್ಟ್ ಗಟ್ಟಹಳ್ಳಿ ಕೋಲಾರ. ಪು.ಸಂ.32) ಎನ್ನುತ್ತಾರೆ. ಆಂಜಿನಪ್ಪರವರ ಕಾಲಕ್ಕಾಗಲೇ ಆಧುನಿಕ ವೈದ್ಯಕೀಯ ವ್ಯವಸ್ಥೆ ಆಸ್ಪತ್ರೆಗಳಿದ್ದರೂ ಅವುಗಳ ಮೊರೆ ಹೋಗದೆ ನಮ್ಮ ಪರಂಪರೆಯಿಂದ ಬಂದಂತಹ ವೈದ್ಯಕೀಯ ಜ್ಞಾನವ್ಯವಸ್ಥೆಯನ್ನು ಮುಂದುವರೆಸುವ ಅರಿವು ಈ ತತ್ವಪದಗಳಲ್ಲಿ ಗಮನಿಸಬಹುದು.

### ಜಡ ಪರಂಪರೆಯ ತಿರಸ್ಕಾರ:

ಕೈವಾರ ತಾತಯ್ಯ ಕೋಲಾರ ಜಿಲ್ಲೆಯ ಅತ್ಯಂತ ಸುಪ್ರಸಿದ್ಧ ತತ್ವಪದಕಾರರು. ಇವರು ನಮ್ಮ ಜನರು ಚಿತ್ತ ಶುದ್ಧಿಯಿಲ್ಲದೆ ಪೂಜಾವ್ರತಗಳನ್ನು ಆಚರಿಸುವ ಮಾತ್ರದಿಂದ ಸಾಕ್ಷಾತ್ಕಾರವಿಲ್ಲ. ಮನಸ್ಸನ್ನು ನಿರ್ಮಲ ಮಾಡಿಕೊಂಡು, ಗುರೂಪದೇಶದಿಂದ ನಮ್ಮನ್ನು ತಿಳಿದುಕೊಳ್ಳುವ ಮಾರ್ಗವನ್ನು ಸಾಧಿಸಿಕೊಳ್ಳಬೇಕು. ಇದರ ಹೊರತಾಗಿ ನಾವು ಬೇರೆಯಾದನ್ನು ಹುಡುಕುತ್ತಾ ಹೋದ ಹಾಗೆ ಏನು ಸಿಗುವುದಿಲ್ಲ. ನಾವು ಮೊದಲಿನಿಂದಲೂ ಬ್ರಾಹ್ಮಣರು ಹೇಳಿರುವ ವಿಷಯಗಳನ್ನು ನಂಬುತ್ತಾ ಬಂದಿದ್ದೇವೆ. ಅವರು ವೇದಾಂತ, ಉಪನಿಷತ್ತು, ರಾಮಾಯಣ,

ಮಹಾಭಾರತದಂತಹ ಗ್ರಂಥಗಳನ್ನು ಓದಿಕೊಂಡು ನಮ್ಮ ತಪ್ಪು–ಒಪ್ಪುಗಳನ್ನು ತಿದ್ದಿ ತಿಳುವಳಿಕೆಯನ್ನು ನೀಡುತ್ತಾರೆ ಎನ್ನುವ ಅಚಲ ನಂಬಿಕೆಯನ್ನು ಇದುವರೆಗೂ ಜನಸಾಮಾನ್ಯರ ಮನಸ್ಸಿನಲ್ಲಿ ತುಂಬಿಸಿದ್ದಾರೆ. ಇವರು ಹೇಳುವ ವಿಚಾರಗಳು ಎಷ್ಟು ಸತ್ಯ ಅಥವಾ ಎಷ್ಟು ಸುಳ್ಳು ಎನ್ನುವ ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮ ಕೈವಾರ ನಾರೇಯಣಪ್ಪನವರು ತಮ್ಮ "ಶ್ರೀ ಕೃಷ್ಣಚರಿತ ತತ್ತ್ವಾಮೃತ ಯೋಗಸಾರಮು" ಎಂಬ ಗ್ರಂಥದಲ್ಲಿ ಅವುಗಳಿಗೆ ತಮ್ಮ ತತ್ವ ಚಿಂತನೆಗಳ ಮೂಲಕ ಎದುರುಗೊಂಡಿದ್ದಾರೆ. ಅದು ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು:

**"ಪದಪಡಿ ಯಿ ನರುಲು–ಪಾರಾಡನೇಲ।**
**ದೇಶದೇಶಂಬುಲು–ತಿರುಗುಟ ಯೇಲ।**
**ವಾಸಿವನ್ನೆಯು ಲೇಕ–ಕೃತಿಂಚನೇಲ।**
**ಮಾತಾಪಿತರಾಚಾರ–ಮಮತಲವೀಲ॥**
**ವೊಕಪೂಟ ಗ್ರಾಸಂಬು–ವರ್ಜಂಚನೇಲ।**
**ಚಿತ್ತಶುದ್ಧಿ ಲೇನಿ–ಶಿವಪೂಜಲೇಲ॥**
**ಕೋಟಿ ಕನ್ಯಾದಾನ–ಫಲಮುಲವಿಯೇಲ।**
**ಜಪತಪಯಜ್ಞಾದಿ–ಕ್ರತುವುಲು ಯೇಲ॥**
**ತೀರ್ಥಯಾತ್ರಲು ಕೊನ್ನಿ–ತ್ರಿಪ್ಪಟದಿ ಯೇಲ।**
**ಲಕ್ಷ್ಮೀದೇವಿ ಅನಂತನೋಮುಲು ಯೇಲ॥**
**ಪಿನ್ನಪೆದ್ದಲಟಂಚು–ಪ್ರಿಯಮುಲು ಯೇಲ।**
**ಮಾರಿ ಮಶಿಡಿ ಪಿಶಾಚ–ಮಮತಲು ಯೇಲ॥**
**ಕಾಶಿ ಗಂಗಾಯಾತ್ರ–ಪ್ರಯಾಣಮುಲು ಯೇಲ।**
**ಸತಮನುಚು ಸಂಸಾರ–ಸರಸಿಲೋ ಚಿಕ್ಕಿ॥**
**ವ್ಯಥಲು ಪಡುಚುಂದುರು–ವರ್ರಿ ಮಾನವುಲು।**
**ಯೆಂದುಕು ಯಿ ಗಾಸಿ– ಯಿವಿ ಅನ್ನಿರೋಸಿ॥**
**ತನ್ನುತಾ ತೆಲಿಸಿನ–ಧನ್ಯುನಿ ಜೇರಿ।**
**ತ್ಸಾಲ ಸದ್ಭಕ್ತಿತೋ– ಸಾಗಿಲಿ ವ್ರೊಕ್ಕಿ॥**
**ಪಾದಾಂಗುಷ್ಠಮುಲ್–ಕನುಲೊತ್ತುಕೊನುಚು।**
**ದೀನದಯಾಕರ–ದಿಕ್ಕುನೀವೆಯನಿನ।"**

**ಕನ್ನಡ ಅನುವಾದ:** ಆಹಾ! ಮಾನವರು ಮತ್ತೆ ಮತ್ತೆ ಜನನ–ಮರಣಗಳಿಗೆ ಸಿಕ್ಕಿ ಲೋಕದಲ್ಲಿ ಓಡಾಡುವುದೇಕೆ? ದೇವರನ್ನು ಹುಡುಕಿಕೊಂಡು ದೇಶವಿದೇಶಗಳಲ್ಲಿ ಸುತ್ತಾಡಿ ಅಲೆಯುವುದೇಕೆ? ವಿಧಿವಿಧಾನಗಳಿಲ್ಲದೆ ವರ್ತಿಸುವುದೇಕೆ? ಮಾತಾ ಪಿತೃಗಳ ಪರಂಪರೆಯಿಂದ ಬಂದ ಸಂಪ್ರದಾಯವೆಂದು ಆಚಾರಗಳ ಬಗ್ಗೆ ಸಲ್ಲದ ಮಮತೆಗಳು ಏತಕ್ಕಾಗಿ? ಒಪ್ಪತ್ತು ಊಟವನ್ನು ಬಿಟ್ಟು ಉಪವಾಸ ವ್ರತ ಏಕೆ ಮಾಡಬೇಕು? ಚಿತ್ತ ಶುದ್ಧಿ ಮಾಡಿಕೊಳ್ಳದೆ ಶಿವಪೂಜೆಗಳನ್ನು ಮಾಡುವುದರಿಂದ ಪ್ರಯೋಜನವೇನು? ಕೋಟಿಗಟ್ಟಲೆ ಕನ್ಯಾದಾನಗಳನ್ನು ಮಾಡಿ ಫಲವನ್ನು

ಬಯಸುವುದಾದರೂ ಏತಕ್ಕಾಗಿ? ಜಪ-ತಪಸ್ಸು-ಯಜ್ಞವೇ ಮೊದಲಾದ ದೊಡ್ಡ ದೊಡ್ಡ ಹವನಹೋಮಗಳಿಗೆ ತೊಡಗುವುದರಿಂದ ಬರುವ ಫಲ ಎಷ್ಟರದ್ದು? ತೀರ್ಥ ಯಾತ್ರೆಗಳೆಂಬ ಹೆಸರಿನಲ್ಲಿ ಅಲೆದಾಡುವುದೇಕೆ? ಲಕ್ಷ್ಮೀವ್ರತ, ಅನಂತ ಪದ್ಮನಾಭ ವ್ರತ ಮೊದಲಾದ ಕಾಮ್ಯವ್ರತಗಳನ್ನು ಆಚರಿಸುವ ಅಗತ್ಯವೇನಿದೆ? ಇವನು ಕಿರಿಯನು, ಮತ್ತೊಬ್ಬನು ಹಿರಿಯನು-ಎಂದು ಅವರ ಜ್ಞಾನದ ಮಹತ್ವವನ್ನು ಗೌರವಿಸದೆ ವಯಸ್ಸಿನ ಆಧಾರದ ಮೇಲೆ ಪುರಸ್ಕರಿಸುವುದರಿಂದ ಏನು ಪ್ರಯೋಜನ? ಮಾರಿ, ಮಸಣಿ-ಮೊದಲಾದ ಪಿಶಾಚಗ್ರಹಗಳ ಪೂಜೆಗಳಿಗೆ ಶರಣಾಗಿ ಏನೋ ಧನ್ಯತೆ ಪಡೆಯುವ ಚಾಪಲ್ಯಗಳೇಕೆ? ಕಾಶಿ ಗಂಗಾಯಾತ್ರೆಗಳಿಂದ ಜನ್ಮ ಧನ್ಯವಾಗುದೆಂಬ ಭ್ರಾಂತಿಯಿಂದ ಪ್ರಯಾಣಗಳಲ್ಲಿ ಆಯಾಸ ಪಡುವುದೇಕೆ? ಎಂದು ಪ್ರಶ್ನಿಸುವುದರ ಮೂಲಕ ಗುರುವಿನ ಮೊರೆ ಹೋಗುವಂತೆ ಕರೆ ನೀಡಿದ್ದಾರೆ. ಇಲ್ಲಿ ಗುರುವೆಂದರೆ ಮತ್ತೆ ಜ್ಞಾನಪರಂಪರೆಯನ್ನು ಸಾರುವ ಮಾರ್ಗ. ಇದು ಜಡ ಪರಂಪರೆಯನ್ನು ತಿರಸ್ಕರಿಸಿ ಒಂದು ಸಂಸ್ಕೃತಿಯ ಒಳಗೆ ನಡೆಯುವ ಆಧುನಿಕ ಬದಲಾವಣೆ ಪ್ರಕ್ರಿಯೆಯನ್ನು ಒಪ್ಪಿಕೊಂಡಂತೆ ಕಂಡುಬರುತ್ತದೆ.

ತತ್ವಪದಕಾರರ ತಾತ್ವಿಕತೆ ನೆಲಮೂಲೀಯ ಜ್ಞಾನ ಪರಂಪರೆಯನ್ನು ಸಾರುವಂತಹದ್ದು. ಆದರೆ ಕೆಲವು ಕಡೆ ಗುಪ್ತ ಪರಂಪರೆಯನ್ನು ಒಪ್ಪಿಕೊಳ್ಳುವ ತತ್ವಪದಗಳು ನಮ್ಮಲ್ಲಿ ದೊರೆಯುತ್ತದೆ. ತತ್ವಪದಗಳು ಒಬ್ಬ ವ್ಯಕ್ತಿಯ ಅನುಭವವು ಜ್ಞಾನವಾಗಿ ಪರಿವರ್ತನೆಗೊಂಡು, ಸಮುದಾಯದಲ್ಲಿ ಜಂಗಮ ಸ್ಥಿತಿಯಲ್ಲಿ ಸಾರಿದ ತಾತ್ವಿಕತೆಯು ಮಹತ್ತರವಾದುದು. ಏನೇ ಆದರೂ ತತ್ವಪದಗಳಲ್ಲಿ ನಿರೂಪಿತಗೊಂಡಿರುವ ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಂಘರ್ಷ ಮತ್ತು ವಿನಿಮಯದ ಇತಿಹಾಸ ನಮ್ಮ ಅರಿವಿನ ವಿಸ್ತಾರಕ್ಕೆ ಕಾರಣವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಲಿಂಗರಾಜು, (2008), ಅನಾದಿಯ ಅನುಭವ ಸೆಲೆ, ಅಧ್ಯಾತ್ಮ ಭಂಡಾರ, ಕನ್ನೂರು.
2. ವಿನಯ್ ಲಾಲ್ & ಆಶಿಶ್ ನಂದಿ, (2010), ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.
3. ನಂಜುಂಡಶಾಸ್ತ್ರಿ ಎನ್., (1998), ಪರಮಹಂಸ ಆಂಜಿನಪ್ಪ ಸ್ವಾಮಿಗಳವರ ದಿವ್ಯ ಜೀವನ ಮತ್ತು ತತ್ವಚಿಂತನೆ, ಶ್ರೀ ಆಂಜನಪ್ಪ ಸ್ವಾಮಿ ಟ್ರಸ್ಟ್ ಗಟ್ಟಹಳ್ಳಿ, ಕೋಲಾರ.
4. ಮಹಾರಾಜ್ ಗಣಪತರಾವ್, (1996), ಕನ್ನಡ ನಾಡಿನ ಸತ್ಪುರುಷರ ಅನುಭಾವಪದಗಳು, ಅಧ್ಯಾತ್ಮ ಭಂಡಾರ, ಕನ್ನೂರು
5. ರಘುನಾಥ ಸ. (ಸಂ), (2010), ಕೈವಾರ ನಾರೇಯಣ: ಮುತ್ತಿನಹಾರ ಮಾಲಿಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.